ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಒಂದು ಲಕ್ಷ ರೂಪಾಯಿಗಳನ್ನು ಸೋಷಿಯರ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು 39 ಮಿಸಲೇನಿಯಸ್‌ನಲ್ಲಿ ಬಡ್ಜೆಟ್ ಅರಾಟ್ ಮಾಡಿ ಹೌಸಿಂಗ್‌ಗೆ ಗ್ರ್ಯಾಂಟ್ ಕೊಡುತ್ತಿಲ್ಲವೇ ?

ಶ್ರೀ ಬಿ. ಎರ್. ಗೌಡ.—ತಮ್ಮ ಪ್ರಶ್ನೆ ಸಹಾಯಧನ ಕೊಡುವುದು. ನಿಮ್ಮಿಡಿಕೊಡುವುದನ್ನು ನಿಲ್ಲಿಸಿದ್ದೇವೆ ಎಂದು ಹೇಳಿದ್ದೇವೆ. ಸೋಷಿಯರ್ ವೆಲ್‌ಫೇರ್ ಡಿಪಾರ್ಟ್‌ಮೆಂಟಿನಿಂದ ಕೊಡುತ್ತಾರೆ, ಸಹಕಾರ ಇಲಾಖೆಯಲ್ಲಿ ಕೊಡುತ್ತಿಲ್ಲ.

ಶ್ರೀ ಆರ್. ಮುನಿಸ್ವಾಮಯ್ಯ.—ಈ ಹರಿಜನ ಗಿರಿಜನರ ಸೊಸೈಟಿಗಳಲ್ಲಿ ಸದಸ್ಯರು ಆಗದೇ ಇರತಕ್ಕವರನ್ನು ಪ್ರೆಸಿಡೆಂಟರನ್ನಾಗಿ ನೇಮಿಸಿದ್ದಾರೆ, ಇದು ನಿಜವೇ ?

ಶ್ರೀ ಬಿ. ಎರ್. ಗೌಡ.—ಹೌದು, ಕೆಲವು ತಾಲ್ಲೂಕು ಮಟ್ಟದ ಸೊಸೈಟಿಗಳಲ್ಲಿ ತಾಲ್ಲೂಕು ಬೋರ್ಡ್ ಅಧ್ಯಕ್ಷರನ್ನು ನೇಮಕ ಮಾಡಿದ್ದಾರೆ.

ಶ್ರೀ ಆರ್. ಮುನಿಸ್ವಾಮಯ್ಯ.—ಇದು ಕಾನೂನಿಗೆ ವಿರೋಧವಲ್ಲವೇ ?

ಶ್ರೀ ಬಿ. ಎರ್. ಗೌಡ.—ವಿರೋಧವೇನೂ ಅಲ್ಲ, ಅವರ ವಿಷೇಚನೆಗೆ (ಆಫ್‌ಷನ್)ಗೆ ಬಿಟ್ಟಿದ್ದೇವೆ ಅವರು ಬೇಕಾದವರನ್ನು ನೇಮಕ ಮಾಡಬಹುದು.

ಶ್ರೀ ಜಿ. ದುಗ್ಗಪ್ಪ.—ನಿನ್ನೆ ನನ್ನ ಪ್ರಶ್ನೆಗೆ 2 ಸಾವಿರ ಅರ್ಜಿಗಳು ಪೆಂಡಿಂಗ್ ಇದೆ ಎಂದು ಹೇಳಿದಿರಿ, ಇವತ್ತು 8635 ಅಂತ ಕರಾರುವಾಕ್ಕಾಗಿ ಇದೆ. ಈ ಅರ್ಜಿಗಳಿಗೆ ಹಣ ಒದಗಿಸಬೇಕಾದರೆ ಎಷ್ಟು ಹಣ ಬೇಕಾಗಬಹುದು ? ಒಂದು ವರ್ಷಕ್ಕೆ ಇಷ್ಟು ಅಂತ ಏನಾದರೂ ಒಂದು ಯೋಜನೆ ಇಟ್ಟುಕೊಂಡಿದ್ದೀರಾ ? ಇದಕ್ಕೆ ಎಷ್ಟು ಹಣ ಒದಗಿಸುತ್ತೀರಿ ?

ಶ್ರೀ ಬಿ. ಎರ್. ಗೌಡ.—ನಿನ್ನೆ ಇದೇ ಪ್ರಶ್ನೆ ಬಂದಾಗ ರಿಜಿಸ್ಟ್ರಾರ್‌ರವರ ಆಫೀಸಿನಲ್ಲಿ ಎರಡು ಸಾವಿರ ಅರ್ಜಿಗಳು ಇವೆ ಎಂದು ಹೇಳಿದೆ. ಈಗ 8 ಸಾವಿರ ಕೊಟ್ಟಿರುವುದು ಇಡೀ ರಾಜ್ಯದಲ್ಲಿ ಇರುವ ಸಂಬಂಧಪಟ್ಟ ಸಹಕಾರ ಸಂಘಗಳಲ್ಲಿ ಇರುವುದನ್ನು ಕೊಟ್ಟಿದ್ದೇವೆ, 8 ಸಾವಿರ ಅರ್ಜಿಗೆ 3 ಕೋಟಿ ರೂಪಾಯಿ ಅಂದಾಜು ಬರಬಹುದು. ಎರ್.ಐ.ಸಿ. ಅವರನ್ನು ಅದಕ್ಕಾಗಿ ಕೇಳಿದ್ದೇವೆ.

ಮಾನ್ಯ ಸದಸ್ಯರು.—3 ಕೋಟಿ 4 ಲಕ್ಷ ರೂಪಾಯಿ ಮಂಜೂರು ಮಾಡಿದ್ದೀರಿ. ಆದರಲ್ಲಿ ಖರ್ಚು ಮಾಡಿರುವುದು 1 ಕೋಟಿ 86 ಲಕ್ಷದ 56 ಸಾವಿರದ 900. ಬಡ್ಡಿ ಹಾಕುವಾಗ 3 ಕೋಟಿ 4 ಲಕ್ಷ ರೂಪಾಯಿಗಳಿಗೆ ಡೇಟ್ ಆಫ್ ಸ್ಯಾಂಕ್ಷನ್‌ನಿಂದ ಹಾಕುತ್ತೀರಾ ಅಥವಾ ಅದರಲ್ಲಿ ಎಷ್ಟು ಹಣ ಕೊಟ್ಟಿದೆಯೋ ಅದಕ್ಕೆ ಮಾತ್ರ ಹಾಕುತ್ತೀರಾ ?

ಶ್ರೀ ಬಿ. ಎರ್. ಗೌಡ.—ಎಷ್ಟು ಹಂಚಿಕೆ ಮಾಡಿದ್ದೇವೆ ಅಷ್ಟಕ್ಕೆ ಮಾತ್ರ ಹಾಕುತ್ತೇವೆ.

Minor Irrigation Work

111. Sri K. RATNAKUMAR SHETTY (Mudabidri).—

Will the Minister of State for Minor Irrigation be pleased to state :—

(*a*) the steps taken regarding the Minor Irrigation Work at Koikude Village of Moolky Firka;

(*b*) the steps that have been taken by Government for the construction of a Salt Water Dam across the Pavanje river ?

Sri D. PARAMESHWARAPPA (Deputy Minister for Major Irrigation and Electricity) [on behalf of SRI A. J. DODDAMETI (Minister of State for Minor Irrigation)].—

(*a*) The estimate for Flood Protecion Works at Kattapuri Babathota in Koikude Village is under preparation.

(*b*) The proposal is found to be not feasible.

ಶ್ರೀ ಕೆ. ರತ್ನಕುಮಾರ ಶೆಟ್ಟಿ.—ಕೊಯ್ಯುಡೆ ಗ್ರಾಮದ ನೀರಾವರಿ ಯೋಜನೆ ಅಂದಾಜು ತಯಾರು ಮಾಡಲಾಗಿದೆ ಎಂದು ಕಾಣಿಸಿದ್ದೀರಿ. 1964ನೇ ಇಸವಿಯಲ್ಲಿ ಇದರ ಪ್ರೇಪ್ಸ್ ಸರ್ಕಾರಕ್ಕೆ ಬಂದಿದೆ, ಚೀಪ್ ಇಂಜನಿಯರು ಕಳುಹಿಸಿದ್ದಾರೆ ಎಂದು ಎಲ್ಲಾ ಅಧಿಕಾರಿಗಳೂ ಹೇಳುತ್ತಾರೆ. ರಾಜ್ಯ ಸರ್ಕಾರದ ಮುಂಜೂರಾತಿ ಮಾತ್ರ ಬಾಕಿ ಇದೆ. ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ತಾವು ಇದನ್ನು ಮುಂಜೂರು ಮಾಡುತ್ತೀರೋ ಇಲ್ಲವೋ! ಮಾಡುವುದಾದರೆ ಎಷ್ಟು ಸಮಯ ತಾವು ತೆಗೆದುಕೊಳ್ಳಬಹುದು ?

†ಶ್ರೀ ಡಿ. ಪರಮೇಶ್ವರಪ್ಪ.—ಇದರ ಎಸ್ಟಿಮೇಟನ್ನು ಸ್ಕ್ರುಟಿನಿ ಮಾಡುತ್ತಾ ಇದ್ದಾರೆ ಚೀಪ್ ಇಂಜನಿಯರ ಆಫೀಸಿನಲ್ಲಿ. ಇದನ್ನು ತೆಗೆದುಕೊಳ್ಳುವುದೇ ಅಥವಾ ಬಿಡುವುದೇ ಎನ್ನುವುದು ಹಣ ಎಷ್ಟು ನಮ್ಮಲ್ಲಿ ಇದೆ ಎನ್ನುವುದರ ಮೇಲೆ ಅವಲಂಬಿಸಿದೆ.

ಶ್ರೀ ಕೆ. ರತ್ನಕುಮಾರ ಶೆಟ್ಟಿ.—ಇನ್ನು ಎರಡನೆಯ ಯೋಜನೆಯ ಬಗ್ಗೆ ನಮ್ಮ ಸರ್ಕಾರದವರಿಗೆ ಸಣ್ಣ ಸಣ್ಣ ನದಿಗಳಿಗೆ ಅಡ್ಡಗಟ್ಟೆಯನ್ನು ಹಾಕುವುದು ಗೊತ್ತಿಲ್ಲದಿರುವಾಗ ಅಥವಾ ಅಭ್ಯಾಸ ವಿಲ್ಲದಿರುವಾಗ ಇನ್ನು ಇದಕ್ಕೆಲ್ಲ ಅವಕಾಶವಿದೆ ? ಈ ಎರಡನೆಯ ಯೋಜನೆ ಸಾಧ್ಯವಿಲ್ಲವೆಂದು ಇಲ್ಲಿ ತಿಳಿಸಲಾಗಿದೆ. ಹೀಗೆ ಹೇಳುವುದಕ್ಕೆ ಕಾರಣವೇನು ?

ಶ್ರೀ ಡಿ. ಪರಮೇಶ್ವರಪ್ಪ.—ಮಾನ್ಯ ಸದಸ್ಯರು ಅಲ್ಲಿ ಬರತಕ್ಕ ಸಾರ್ವೆಯಾರನ್ನು ತಡೆಯಲು ಒಂದು ಅಡ್ಡಗಟ್ಟೆಯನ್ನು ಮಾಡಿಸಿ ಕೊಡಬೇಕೆಂದು ಮನವಿಯನ್ನು ಅವರು ಸಲ್ಲಿಸಿದ್ದರು. ಅದನ್ನು ಪರಿಶೀಲನೆ ಮಾಡಿದ್ದರಲ್ಲಿ ಅದು ನಾಚ್ ಫೀಜಿಬಲ್ ಎಂದಾಯಿತು. ಆಗ ಅವರು ಇನ್ನೊಂದು ಅಡ್ಡಗಟ್ಟೆಯನ್ನು ಮಾಡಿಸಿಕೊಡಿ ಎಂದು ಕೇಳಿದರು. ಆದರೆ ಅದರ ಕೆಳಭಾಗದ ಏರಿಯಾದಲ್ಲಿ ಈಗಾಗಲೇ ಒಂದು ಅಡ್ಡಕಟ್ಟೆಯನ್ನು ಮಾಡಿರುವಾಗಿದೆ. ಅಲ್ಲಿ ಮತ್ತೆ ಒಂದನ್ನು ಹೊಸದಾಗಿ ಕಟ್ಟುವುದಕ್ಕಿಂತ ಅನವಶ್ಯಕ ಎಂಬ ಒಪಿನಿಯನ್ ಬಂದಿತು. ಅನಂತರ ಮಾನ್ಯ ಸದಸ್ಯರು ಆ ಪಾವಂಜೆ ನದಿಗೆ ಬರತಕ್ಕ ಒಂದು ಟ್ರಿಬ್ಯುಟರಿಗೆ ಅಡ್ಡಗಟ್ಟೆಹಾಕಿದೆ ಅದಕ್ಕೆ ಒಂದು ನಾಲೆಯನ್ನು ಮಾಡಿಸಿ ಕೊಡಬೇಕೆಂದು ಕೇಳಿಕೊಂಡರು. ಆದರೆ ಅಲ್ಲಿ ಒಂದು ನಾಲೆಯನ್ನು ಮಾಡಿಸಿಕೊಡಬೇಕೆಂದು ಕೇಳಿಕೊಂಡರು. ಆದರೆ ಅಲ್ಲಿ ಒಂದು ಹೊಸ ಥಾನಲ್ ಮಾಡುವುದಕ್ಕೆ ಅಲ್ಲಿ ಜನರು ಜಮೀನನ್ನು ಬಿಟ್ಟುಕೊಡುವುದಕ್ಕೆ ಒಪ್ಪುತ್ತಿಲ್ಲ. ವಿಚಾರ ಈ ಮಟ್ಟದಲ್ಲಿದೆ.

Taluk Board Elections

135. Sri SADASHIVAPPA PATIL (Deodurg).—

Will the Minister for Development be pleased to state :—

(*a*) whether the Govrenment is aware that no indelible ink for marking the voters during the Taluk Board Elections held recently was used ;

(*b*) if so, the reasons for not using the same ?

Sri B. L. GOWDA (Deputy Minister for Co-operation).—

(*a*) Yes.

(*b*) As sufficient safeguards are provided in the Mysore Panchayats and Taluk Boards Elections Rules, 1959, the system of marking voters in the indelible link was not considered necessary.

ಶ್ರೀ ಸದಾಶಿವಪ್ಪ ಪಾಟೀಲ್.—ಇಲ್ಲಿ ಉತ್ತರದಲ್ಲಿ ಸಾಕಷ್ಟು ರಕ್ಷಣೋಪಾಯಗಳನ್ನು ಕಲ್ಪಿಸಲಾಗಿತ್ತು—ಎಂದು ಹೇಳಿದೆ. ಅಂಥ ಯಾವ ರಕ್ಷಣೆಗಳನ್ನು ಕಲ್ಪಿಸಲಾಗಿತ್ತು ?

†ಶ್ರೀ ಬಿ .ಎಲ್. ಗೌಡ.—ರೂಲ್ಸಿನಲ್ಲಿ ಎರಡುಬಾರಿ ಚುನಾವಣೆಗಳನ್ನು ಮಾಡುವುದಕ್ಕೆ ಅವಕಾಶವಿಲ್ಲ. ಆದ್ದರಿಂದ ರೀಎಲೆಕ್ಷನ್ ಮಾಡುವುದಕ್ಕೆ ಆಗುವುದಿಲ್ಲ.